ಕಿರು ಬೆರಳಿಗೂ ಚಿಕ್ಕದಾದ ಉಂಗುರವೇ ಉತ್ತಮ. ಕೈ ಬೆರಳುಗಳಲ್ಲಿ ಹರಳು, ಆ್ಯಂಟಿಕ್, ಮುತ್ತು– ರತ್ನ, ಹೊಳಪಿನ ಚಿನ್ನದ ಉಂಗುರ ಹೀಗೆ ವಿವಿಧ ವಿನ್ಯಾಸದ ಅಲಂಕಾರ ಸೊಗಸಾಗಿರುತ್ತದೆ.

## ಕಿವಿಯೋಲೆ

ಇತ್ತೀಚಿನ ದಿನಗಳಲ್ಲಿ ದೊಡ್ಡದಾದ ಆ್ಯಂಟಿಕ್ ಝುಮ್ಕಿ ತೊಡುವುದು ಟ್ರೆಂಡ್ ಆಗಿದೆ. ಚಿಕ್ಕ ಓಲೆಗಳು, ದೊಡ್ಡ ಓಲೆಗಳು ಇತರ ಕಾರ್ಯಕ್ರಮಗಳಿಗೆ ತೊಡುವುದು ವಾಡಿಕೆಯಲ್ಲಿದ್ದರೂ ಮದುಮಗಳಿಗೆ ದ್ರಾಕ್ಷಿ ಗೊಂಚಲನ್ನು ಹೋಲುವ ಮಣಿ ಮತ್ತು ರತ್ನಗಳನ್ನು ಹೊಂದಿದ ಬಳ್ಳಿ, ಹೂವಿನ, ಎಲೆಗಳ ವಿನ್ಯಾಸದ ಝುಮ್ಕಿ ಚಂದ. ಇದರಲ್ಲಿ ಚೌಕ, ತ್ರಿಕೋನ, ವೃತ್ತಾಕಾರದ ವಿನ್ಯಾಸಗಳು ಲಭ್ಯ. ಒಂದರೊಳಗೊಂದು ಝುಮ್ಕಿ, ಕೆಳಗೊಂದು ಜೋತಾಡುವ ಮುತ್ತು ಬಹಳ ಬೇಡಿಕೆಯಲ್ಲಿದೆ.

ಹವಳ, ಪಚ್ಚೆ, ಮಾಣಿಕ್ಯ, ಮುತ್ತುಗಳ ಝುಮ್ಕಿಗಳು ಇಂದು ಅತಿ ಬೇಡಿಕೆಯಲ್ಲಿದ್ದು, ಇವು ಸೀರೆ ಅಥವಾ ಲೆಹಂಗಾದ ರಂಗಿಗೆ ಹೊಂದುತ್ತವೆ.

## ಸೊಂಟದ ಪಟ್ಟಿ

ಮದುಮಗಳು ಎಂದಾಗ ಸೊಂಟಪಟ್ಟಿ ಇರಲೇಬೇಕು. ಇಂದು ವಿನ್ಯಾಸಕಾರರು ಚಿಂತಿಸಿ ಫೈವ್ ಇನ್ ಒನ್ ಆಭರಣಗಳನ್ನು ತಯಾರಿಸಿದ್ದಾರೆ. ಸೊಂಟ ಪಟ್ಟಿಯನ್ನು ಸೊಂಟಕ್ಕೆ ಮಾತ್ರವಲ್ಲದೆ ಹಾರವಾಗಿ ಬಳಸಬಹುದು. ಅಲ್ಲದೆ ಈ ಆಭರಣದಿಂದ ಪೆಂಡೆಂಟನ್ನು ಪ್ರತ್ಯೇಕಿಸಿ ಚೈನಲ್ಲಿ ಪೋಣಿಸಿ ಧರಿಸಬಹುದು. ಈ ಆಭರಣದ ಒಂದು ಭಾಗವನ್ನು ತೋಳಬಂದಿಯಾಗಿಯೂ ಧರಿಸಬಹುದು. ಅಲ್ಲದೆ ಹಣೆಯ ಆಭರಣವಾಗಿ, ಮುಂದೆಲೆಯಾಗಿ, ಬ್ರೇಸ್ಲೆಟ್ ಆಗಿ ಧರಿಸಬಹುದು. ಸೊಂಟದ ಸುತ್ತಲೂ ಬರುವಂತೆ ಅಥವಾ ಅರ್ಧ ಸೊಂಟದಲ್ಲಿ ಜೋತಾಡುವಂತೆ ಧರಿಸಬಹುದು. ಇದು ಇಂದಿನ ಟ್ರೆಂಡ್‌ಗೆ ಹೊಂದಿಕೊಳ್ಳುತ್ತದೆ. ಒಟ್ಟಿನಲ್ಲಿ ಒಂದು ಆಭರಣವನ್ನು ಹಲವಾರು ರೀತಿಯಲ್ಲಿ ಧರಿಸಬಹುದು.

## ತೋಳಬಂದಿ

ತೋಳಬಂದಿ ಬೇಡ, ಮದುವೆಯಲ್ಲಿ ಮಾತ್ರ ಹಾಕಿಕೊಳ್ಳಬಹುದು ಎನ್ನುವ ಕಾಲ ಹೊರಟು ಹೋಗಿದೆ. ಇಂದು ತೆಳ್ಳಗಿನ, ಉರುಟಾದ ಹಿಂದೆ ಹುಕ್ ಇರುವ ವಿಧ ವಿಧವಾದ ತೋಳಬಂದಿಗಳು ಲಭ್ಯ. ಇದನ್ನು ತೋಳಬಂದಿ ಮಾತ್ರವಲ್ಲದೆ ಬ್ರೇಸ್ಲೆಟ್ ಆಗಿ, ನೆಕ್ಲೇಸ್ ಆಗಿ ಬಳಸಬಹುದು. ಚಿಕ್ಕ ಪುಟ್ಟ ಸಮಾರಂಭಗಳಲ್ಲಿ ಲೈಟ್ ವೇಟ್ ತೋಳಬಂದಿಯನ್ನು ಬಳಸುವುದು ಸಾಮಾನ್ಯ.

★ ತೋಳ ಬಂದಿ ಮತ್ತು ದೊಡ್ಡ ಕಿವಿಯೋಲೆ ಧರಿಸಿದರೆ ಕೊರಳಲ್ಲಿ ಹೆಚ್ಚು ಭಾರವಾದ ಒಡವೆ ಬೇಡ. ಅಗಲ ಅಂಚಿರುವ ಸೀರೆ ಉಟ್ಟರೆ ಸಾಕು.

★ ದೊಡ್ಡ ಕಿವಿಯೋಲೆ ಮತ್ತು ದೊಡ್ಡ ಉಂಗುರ, ಅಗಲವಾದ ಬಳೆ ಧರಿಸಿದರೆ ಲೆಹೆಂಗಾದ ರವಿಕೆಗೆ ಕತ್ತಿನ ವಿನ್ಯಾಸ ಸ್ಟೋನ್ ವರ್ಕ್ ಎಂಬ್ರಾಯಿಡರಿ ಇರಬೇಕು.

★ ಚಿಕ್ಕ ಕಿವಿಯೋಲೆ, ಉಂಗುರ, ನೆಕ್ಲೇಸ್, ಬಳೆ ಎಲ್ಲಾ ಧರಿಸುವುದಿದ್ದರೆ ಎಲ್ಲಾ ಆಭರಣಗಳು ಮಧ್ಯಮ ಆಕಾರದಲ್ಲಿರಲಿ.

★ ಅಗಲವಾದ ಹಾಗೂ ಉದ್ದನೆಯ ಹಾರ ಧರಿಸುವುದಿದ್ದರೆ ಅದರ ಜೊತೆಗೆ ತೆಳ್ಳಗಿನ ತೋಳಬಂದಿ, ಅಗಲವಾದ ಬಳೆ, ಕಿವಿಗೊಪ್ಪುವ ಓಲೆ ಇರಲಿ.

★ ಮುಂದಲೆ ಕೊರಳಿನ ಆಭರಣ ವಿನ್ಯಾಸಕ್ಕೆ ಹೊಂದುವಂತಿರಬೇಕು. ಕಿವಿಯೋಲೆ, ಸರದ ಜೊತೆಗೆ ಮುಂದಲೆ, ಉಂಗುರ ಒಂದೇ ವಿನ್ಯಾಸದ್ದಾಗಿದ್ದರೆ, ಬಳೆ ವಿಭಿನ್ನವಾದ ವಿನ್ಯಾಸದ್ದಾದರೂ ಹೊಂದಿಕೊಳ್ಳುತ್ತದೆ. ಇದನ್ನು ಖರೀದಿಸುವಾಗ ಗಮನಿಸಬೇಕು. ಮದುಮಗಳಲ್ಲದೆ ಸಹೋದರಿಯರು, ತಾಯಿ, ಹತ್ತಿರದ ಸಂಬಂಧಿಕರು ಆಭರಣವನ್ನು ಈ ರೀತಿಯಾಗಿ ಧರಿಸಿಕೊಳ್ಳಬಹುದು. ಮದುವೆಯ ಸಂಭ್ರಮದಲ್ಲಿ ಓಡಾಡುವವರ ದೃಷ್ಟಿ ಆಭರಣದ ಮೇಲೆ ಹೋಗಬೇಕಾದರೆ ಧರಿಸಿದ ಕ್ರಮ ಸರಿಯಾಗಿದ್ದು ಅದರದರ ಸ್ಥಾನದಲ್ಲಿ ಇರಬೇಕು.



